**ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಅರಕಲಗೂಡು**

**ಸಿ. ಸಿ. ನಂಃ 751/2021**

| | | | | | |
|---|---|---|---|---|---|
| ಸಾಕ್ಷಿಯ ಹೆಸರು | ಃ | ರೇಖಾ | **ದಿನಾಂಕ** | ಃ | **01/02/2024** |
| ಗಂಡನಹೆಸರು | ಃ | ಅಣ್ಣಪ್ಪ | **ಸಿ ಡಬ್ಲ್ಯೂ** | ಃ | **03** |
| ವಯಸ್ಸು | ಃ | **30** ವರ್ಷ | **ಪಿ ಡಬ್ಲ್ಯೂ** | ಃ | **03** |
| ಉದ್ಯೋಗ | ಃ | ಗೃಹಿಣಿ | | | |
| ವಿಳಾಸ | ಃ | ಮರಡಿ ಗ್ರಾಮ | | | |

**ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಸಸಅ ರವರಿಂದ ಃ-**

ಚಾಸಾ 1 ಮತ್ತು 2 ನನ್ನ ಊರಿನವರು. ಆರೋಪಿತರು ನನ್ನ ಊರಿನವರು. ಸುಮಾರು 3 ವರ್ಷಗಳ ಹಿಂದೆ 1 ಹಾಗೂ 2 ನೇ ಅರೋಪಿತರು ಚಾಸಾ 1 ರವರಿಗೆ ಕೆಳಕ್ಕೆ ಹಾಕಿ ತುಳಿಯುತ್ತಿದ್ದರು. ಆಗ ಚಾಸಾ 1 ರವರ ಮಕ್ಕಳು ಅಳುತ್ತಾ ಇದ್ದವು. ನಾನು ಬಿಡಿಸಲು ಹೋದಾಗ 1 ಮತ್ತು 2 ನೇ ಅರೋಪಿತರು ರಾಡ್ ನಿಂದ ನನ್ನ ತಲೆಯ ಮಧ್ಯಭಾಗಕ್ಕೆ ಹೊಡೆದರು. ಆಗ ನಾನು ಜ್ಞಾನ ತಪ್ಪಿ ಬಿದ್ದು ಹೋದೆ. ಚಾಸಾ 1 ರವರು ನನಗೆ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿದರು. ಆಸ್ಪತ್ರೆಗೆ ನನ್ನ ಜೊತೆ ಬೇರೆ ಯಾರೂ ಬರಲಿಲ್ಲ. ಈಗ ನ್ಯಾಯಾಲಯದ ಮುಂದೆ ಇರುವ ಎಂ ಓ **2** ರಾಡ್ ಸದರಿ ದಿನದಂದು ಆರೋಪಿತರು ನನಗೆ ಹೊಡೆಯಲು ಬಳಸಿದ ರಾಡ್ ಆಗಿರುತ್ತದೆ.

(ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಕೋರಿರುತ್ತಾರೆ, ಪರಿಶೀಲಿಸಿ ಅನುಮತಿ ನೀಡಲಾಯಿತು)

**ಪಾಟಿ ಸವಾಲು ಎಪಿಪಿಯವರಿಂದಃ**

ದಿಃ **14.04.2021** ರಂದು ರಾತ್ರಿ **8** ಗಂಟೆಗೆ **1** ರಿಂದ **4** ನೇ ಅರೋಪಿತರೆಲ್ಲರೂ ಚಾಸಾ **2** ರವರ ಮನೆಗೆ ಬಂದು ಜಮೀನು ಮತ್ತು ಮನೆಯನ್ನು ಖಾತೆ ಮಾಡಿಸಿಕೊಳ್ಳಬೇಕು ಎಂದು ಹೇಳಿ ಚಾಸಾ **2** ರವರನ್ನು ಸಹಿ ಮಾಡಲು ಕೇಳಿ ಗಲಾಟೆ ಮಾಡಿ ಅವರ ಕೈಯಿಂದ ಚಾಸಾ **2** ರವರ ಮೈಕೈಗೆ ಹೊಡೆದರು ಎಂದರೆ ಸರಿ. ನಂತರ ಚಾಸಾ **1** ರವರು ಅಲ್ಲಿಗೆ ಬಂದು ಅವರನ್ನು ಪ್ರಶ್ನಿಸಿದರು ಹಾಗೂ ಚಾಸಾ **2** ರವರು ಪೊಲೀಸ್ ಠಾಣೆಗೆ ಹೋಗಿ ದೂರು ನೀಡಲು ಹೇಳಿದರು. ಆ ಸಮಯದಲ್ಲಿ ಚಾಸಾ **2** ರವರು ದೂರು ನೀಡಲು ಹೋಗುತ್ತಿದ್ದಾಗ **1** ಮತ್ತು **2** ನೇ ಆರೋಪಿತರು ಚಾಸಾ **2**

ರವರನ್ನು ಹಿಡಿದುಕೊಂಡು ಅಪಮಾನವಾಗುವ ರೀತಿಯಲ್ಲಿ ಎಳೆದು ಅವಾಚ್ಯ ಶಬ್ದಗಳಿಂದ ಬೈದರು ಎಂದರೆ ಸರಿ. ನಂತರ 1 ನೇ ಆರೋಪಿ ಕೈಯಿಂದ ಚಾಸಾ 2 ರವರ ಎಡಭುಜಕ್ಕೆ , 2 ನೇ ಆರೋಪಿ ಕೈಯಿಂದ ಚಾಸಾ 2 ರವರ ಕುತ್ತಿಗೆಯ ಹಿಂಭಾಗಕ್ಕೆ ಹೊಡೆದು ನೋವುಂಟು ಮಾಡಿದರು ಎಂದರೆ ಸರಿ. ನಂತರ ಚಾಸಾ 1 ರವರನ್ನು ಹಿಡಿದುಕೊಂಡು ಎಳೆದಾಡಿ 2 ನೇ ಆರೋಪಿ ಚಾಸಾ 2 ರವರ ಎದೆಗೆ ಹೊಡೆದು ನೋವುಂಟು ಮಾಡಿದರು ಹಾಗೂ ನಂತರ 1 ರಿಂದ 4 ನೇ ಆರೋಪಿತರೆಲ್ಲರೂ ಚಾಸಾ 1 ರವರನ್ನು ಕೆಳಗೆ ಬೀಳಿಸಿ 1 ನೇ ಆರೋಪಿ ದೊಣ್ಣೆಯಿಂದ ಚಾಸಾ 1 ರವರ ಎಡಗಾಲಿನ ಬೆರಳಿಗೆ ಹೊಡೆದು ನೋವುಂಟು ಮಾಡಿದರು. ಆಗ 3 ನೇ ಅರೋಪಿ ಚಾಸಾ 1 ರವರ ಎಡಗಾಲಿನ ಬೆರಳಿಗೆ ಕಲ್ಲನ್ನು ಎತ್ತಿಹಾಕಿದರು ಹಾಗೂ ನೋವುಪಡಿಸಿದರು ಎಂದರೆ ಸರಿ. ಆ ಸಮಯದಲ್ಲಿ ಚಾಸಾ 3 ರವರು ಜಗಳ ಬಿಡಿಸಲು ಬಂದಾಗ ಆರೋಪಿತರು ಅವರಿಗೆ ಅವಮಾನವಾಗುವ ರೀತಿಯಲ್ಲಿ ಅವಾಚ್ಯ ಶಬ್ದಗಳಿಂದ ಬೈದು ಕಬ್ಬಿಣದ ರಾಡ್ ನಿಂದ ತಲೆಯ ಮಧ್ಯಭಾಗಕ್ಕೆ ಹೊಡೆದು ಸಾಮಾನ್ಯ ಸ್ವರೂಪದ ನೋವುಂಟು ಮಾಡಿದರು ಎಂದರೆ ಸರಿ. ಆಗ 1 ಮತ್ತು 2 ನೇ ಆರೋಪಿತರು ಚಾಸಾ 2 ರವರಿಗೆ ಹಾಗೂ ಚಾಸಾ 1 ಮತ್ತು ನನಗೆ ಕೊಲೆ ಮಾಡುವುದಾಗಿ ಹೇಳಿ ಕೊಲೆ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ. ನಂತರ ಚಾಸಾ 4 ಮತ್ತು 5 ರವರು ನನ್ನನ್ನು ಮತ್ತು ಚಾಸಾ 1 ಮತ್ತು ಚಾಸಾ 2 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿದರು ಹಾಗೂ ನಂತರ ಊರಿನಲ್ಲಿ ಪಂಚಾಯಿತಿ ಮಾಡುವುದಾಗಿ ಹೇಳಿದ್ದರು. ಆದರೆ ಊರಿನಲ್ಲಿ ಪಂಚಾಯಿತಿ ನಡೆಯದ ಕಾರಣ ದಿನಾಂಕ 20.04.2021 ರಂದು ಚಾಸಾ 1 ರವರು ಅರಕಲಗೂಡು ಪೊಲೀಸ್ ಠಾಣೆಗೆ ಹೋಗಿ ದೂರು ನೀಡಿರುತ್ತಾರೆ ಎಂದರೆ ಸರಿ. ಈ ಪ್ರಕರಣಕ್ಕೆ ಸಂಬಂದಪಟ್ಟಂತೆ ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ. ಈಗ ನ್ಯಾಯಾಲಯದ ಮುಂದೆ ಇರುವ ಎಂ.ಓ 1 ರಿಂದ 3 ಸದರಿ ದಿನದಂದು ಆರೋಪಿತರು ಹಲ್ಲೆಗೆ ಬಳಸಿದ ದೊಣ್ಣೆ , ಕಬ್ಬಿಣದ ರಾಡ್ ಮತ್ತು ಕಲ್ಲು ಆಗಿರುತ್ತದೆ.

ಪಾಟೀ ಸವಾಲು ಶ್ರೀ ಜಿ ಡಿ ಎಂ ವಕೀಲರಿಂದ ಆರೋಪಿತರ ಪರಃ

ನನ್ನ ಹಾಗೂ ಚಾಸಾ 1 ರವರ ಮನೆ ಹತ್ತಿರದಲ್ಲೇ ಇರುತ್ತದೆ. ಚಾಸಾ 1 ರವರ ಮನೆಯಲ್ಲಿ ಮಾತನಾಡುವುದು ನಮ್ಮ ಮನೆಯಲ್ಲಿ ಕೇಳಿಸುವುದಿಲ್ಲ ಎಂದರೆ ಸರಿಯಲ್ಲ. ಚಾಸಾ 1 ರವರ ಪರಿವಾರದ ಜೊತೆ ನಾನು ಚೆನ್ನಾಗಿದ್ದೇನೆ ಎಂದರೆ ಸರಿ. 3 ನೇ ಆರೋಪಿಗೂ ನನಗೂ ಅಷ್ಟಕ್ಕಷ್ಟೇ ಮಾತುಕತೆ ಹಾಗೂ ನಾನು 3 ನೇ ಆರೋಪಿಯ ಜೊತೆ ಪ್ರೀತಿಯಿಂದ ಮಾತನಾಡಿಸುವುದಿಲ್ಲ ಎಂದರೆ

ಸರಿ. ಗಲಾಟೆಯಾಯಿತು ಎಂದು ಹೇಳಲಾದ ಸಮಯದಲ್ಲಿ ನಾನು ನನ್ನ ಮನೆಯಲ್ಲಿ ಇದ್ದೆ ಎಂದರೆ ಸರಿ. ಹಾಗಾಗಿ ಆರೋಪಿತರು ಚಾಸಾ 1 ರವರ ಮನೆಯಲ್ಲಿ ಏನು ಮಾತನಾಡುತ್ತಿದ್ದರು ಎಂದು ನನಗೆ ತಿಳಿಯಲಿಲ್ಲ ಎಂದರೆ ಸರಿಯಲ್ಲ. ಗಲಾಟೆಯಾಯಿತು ಎಂದು ಹೇಳಲಾದ ಸಮಯದಲ್ಲಿ ವಿದ್ಯುಚ್ಛಕ್ತಿ ಇರಲಿಲ್ಲ ಎಂದರೆ ಸರಿಯಲ್ಲ. ಕತ್ತಲೆಯಲ್ಲಿ ನಮ್ಮ ಮನೆಯಲ್ಲಿ ತಿರುಗಾಡುವಾಗ ನಾನು ಮನೆಯ ಬಾಗಿಲಿಗೆ ಹೊಡೆದುಕೊಂಡು ತಲೆಗೆ ಏಟುಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಪ್ರಜ್ಞೆ ತಪ್ಪಿ ನಾನು ಬಿದ್ದಾಗ ನನಗೆ ಯಾರು ಕರೆದುಕೊಂಡುಹೋದರು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ ಆರೋಪಿತರು ಯಾವುದೇ ತಪ್ಪು ಮಾಡದಿದ್ದರೂ ಸಹ ಚಾಸಾ 1 ರವರ ಮಾತನ್ನು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಎಂ.ಓ.1 ದೊಣ್ಣೆಯನ್ನು ನನ್ನ ಮನೆಯಿಂದ ನಾನೇ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಎಂ.ಓ.1 ರಿಂದ 3 ಸಾಮಾನ್ಯವಾಗಿ ಎಲ್ಲರ ಮನೆಯಲ್ಲಿ ಇರುತ್ತದೆ ಎಂದರೆ ಸರಿ. ನಾನು ಪೊಲೀಸರಿಗೆ ಹೇಳಿಕೆ ಕೊಟ್ಟಿರುವುದಾಗಲೀ ಅಥವಾ ಪೊಲೀಸರು ಅದರಲ್ಲಿ ಏನು ಬರೆದುಕೊಂಡರು ಎಂದು ಗೊತ್ತಿಲ್ಲ. ನನಗೆ ಯಾವುದೇ ವಿಚಾರ ಗೊತ್ತಿಲ್ಲದೇ ಇದ್ದರೂ ಸಹ ಚಾಸಾ 1 ರವರ ಮಾತನ್ನು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಎಂ ಓ 1 ರಿಂದ 3 ವಸ್ತುಗಳನ್ನು ನಾನು ಇದೇ ಮೊದಲ ಬಾರಿಗೆ ನೋಡುತ್ತಿದ್ದೇನೆ ಎಂದರೆ ಸರಿ. ಈ ಮದ್ದೆಮಾಲಿಗೂ ಆರೋಪಿತರಿಗೂ ಯಾವುದೇ ಸಂಬಂದ ಇರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ 1 ರವರಿಗೆ ಆರೋಪಿತರು ತುಳಿಯುತ್ತಿದ್ದರು ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1 ಮತ್ತು 2 ನೇ ಆರೋಪಿತರು ನನಗೆ ರಾಡ್ ನಿಂದ ಹೊಡದಿರುವುದಿಲ್ಲ, ಸುಳ್ಳು ಸಾಕ್ಷ್ಯ ನುಡಿಯತ್ತಿದ್ದೇನೆ ಎಂದರೆ ಸರಿಯಲ್ಲ.

**( ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾ.ದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ.ಸ.ಇದೆ.**

**ಜೆಎಂಎಫ್‌ಸಿ, ಅರಕಲಗೂಡು.**